Deaths of Eleven persons in Bangalore.

ಶ್ರೀ ಪಾಟಾಳ್ ನಾಗರಾಜ್.—ಬೆಂಗಳೂರು ನಗರದಲ್ಲಿ 11 ಜನರು ಕಳ್ಳಭಟ್ಟಿ ಸಾರಾಯಿ ಕುಡಿದು ಸತ್ತಿರುತ್ತಾರೆ, ಅದರ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ನನಗೆ 12-50 ಗಂಟೆಯಲ್ಲಿ ತಮ್ಮ ನೋಟೀಸ್ ಬಂದಿದೆ. ಒಂದು ಗಂಟೆಗೆ ಅಧಿವೇಶನ ಪ್ರಾರಂಭವಾಗುತ್ತದೆ. ಆದ್ದರಿಂದ ನಾನು ಯಾರಿಗೆ ನೋಟೀಸ್ ಕೊಡಬೇಕು? ಆದ್ದರಿಂದ ತಾವು ತಮ್ಮ ಕಾಲ್ ಅಟೆನ್‌ಷನ್ ನೋಟೀಸನ್ನು ಇನ್ನೂ ಮುಂಚಿತವಾಗಿಯೇ ಕೊಡಬೇಕಾಗಿತ್ತು.

ಶ್ರೀ ಪಾಟಾಳ್ ನಾಗರಾಜ್.—11 ಜನರು ಸತ್ತಿರುವ ಬಗ್ಗೆ ಸರ್ಕಾರದವರು ಮಾಹಿತಿಯನ್ನು ತಂದಿರುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಅದರ ಬಗ್ಗೆ ಮಂತ್ರಿಗಳು ಉತ್ತರ ಹೇಳಬಹುದು.

ಅಧ್ಯಕ್ಷರು.—ಆ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ. ಮಂತ್ರಿಗಳನ್ನು ಬೇಕಾದರೆ ಆಮೇಲೆ ಕೇಳಿ. ಅವರು ಅದನ್ನು ಹೇಳುತ್ತಾರೆ.

ಶ್ರೀ ಪಾಟಾಳ್ ನಾಗರಾಜ್.—11 ಜನರು ಸತ್ತಿರುವುದಕ್ಕಿಂತ ಬೇರೆ ಪ್ರಾಮುಖ್ಯವಾದ ವಿಷಯವೇನು?

ಶ್ರೀ ಎಚ್.ಡಿ. ದೇವೇಗೌಡ.—ನನಗೂ ಸ್ವಲ್ಪ ಪೇಪರ್ ಓದುವ ಅಭ್ಯಾಸವಿದೆ. ಈ 11 ಜನರು ಸತ್ತಿರುವುದು ಸರ್ಕಾರದ ಅಜಾಗರೂಕತೆಯಿಂದ. ಇವತ್ತು ಎಕ್ಸೈಜ್ ಕಮಿಷನರ್ ಇದ್ದಾರೆ. ಡಿ.ಐ.ಜಿ. ಅವರು ಕೆಲಸಮಾಡುವ ಕಾಲದಲ್ಲಿ ಸರ್ಕಾರ ಎಷ್ಟು ಬಿಗಿಯಾಗಿ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಅಲೋಚನೆ ಮಾಡಬೇಕು. ಡಿ.ಐ.ಜಿ. ಪೋಸ್ಟನ್ನು ಛರ್ತಿ ಮಾಡಬಾರದು. ಹಿಂದೆ ಇದ್ದಂಥ ಡಿ.ಐ.ಜಿ ಸ್ಥಿಕ್ಕಾಗಿ ಕೆಲಸಮಾಡಿದ್ದಾರೆ. ಆದ್ದರಿಂದ ಈಗ ಸರ್ಕಾರದಿಂದ ಉತ್ತರಬೇಕು.

ಅಧ್ಯಕ್ಷರು.—ಅವರು ಉತ್ತರ ಕೊಡುವುದಿಲ್ಲವೆಂದು ಯಾರೂ ಹೇಳುವುದಿಲ್ಲ. ನನಗೆ ಉತ್ತರ ಬರುತ್ತದೆ.

ಶ್ರೀ ಪಾಟಾಳ್ ನಾಗರಾಜ್.—ಸರ್ಕಾರದವರು ಇಂತಹ ಪ್ರಶ್ನೆಗಳು ಇವತ್ತು ಸಭೆಯಲ್ಲಿ ಬರುತ್ತವೆಂದು ತಿಳಿದುಕೊಂಡು ಉತ್ತರಗಳನ್ನು ಸಿದ್ಧವಾಗಿಟ್ಟುಕೊಂಡಿರಬೇಕು. 11 ಜನರು ಸತ್ತಿದ್ದಾರೆ ಎಂದು ಹೇಳಿದ ಮೇಲೆ ಜವಾಬ್ದಾರಿ ಅವರಿಗೆ ಕೊಡಬೇಕು. ಇದು ಬಹಳ ಮುಖ್ಯವಾದದು. ಆದ್ದರಿಂದ ಸರ್ಕಾರದ ಪರವಾಗಿ ಸರ್ಕಾರ ಯಾವಾಗ ಸ್ಟೇಟ್‌ಮೆಂಟ್ ಮಾಡುತ್ತಾರೆ?

ಅಧ್ಯಕ್ಷರು.—ಅದಷ್ಟು ಜಾಗ್ರತೆಯಾಗಿ ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ನಿಲುವಳಿ ಸೂಚನೆಯನ್ನು ಎಲ್ಲರೂ ಸೇರಿ ಕಳುಹಿಸಿದ್ದಾರೆ. ತಾವು ಅದನ್ನು ಕಳುಹಿಸಿದ ಮೇಲೆ ಸರ್ಕಾರದವರು ಒಂದು ಹೇಳಿಕೆಯನ್ನು ಕೊಡುತ್ತಾರೆಯೇ?

ಅಧ್ಯಕ್ಷರು.—ನಿಲುವಳಿ ಸೂಚನೆಯನ್ನು ಕಾಲ್ ಅಟೆನ್‌ಷನ್ ನೋಟೀಸಿಗೆ ಪರಿವರ್ತನೆ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈ ಸಭೆಯಲ್ಲಿ ಈ ವಿಚಾರ ಪ್ರಸ್ತಾಪವಾಗಿರುವುದು ಸರ್ಕಾರಕ್ಕೇ ಗೊತ್ತಿರುತ್ತದೆ. ಸ್ಟೇಟ್‌ಮೆಂಟನ್ನು ಇವತ್ತು ಅಥವಾ ನಾಳೆ ಹೇಳುತ್ತೇವೆಂದು ಹೇಳಬಹುದು. ಈಗ ಇಲ್ಲಿ ಮಾನ್ಯ ಶ್ರೀ ಸಿದ್ದವೀರಪ್ಪನವರು ಇದ್ದಾರೆ. 11 ಜನರು ಸತ್ತಿದ್ದಾರೆಂಬುದು ಅವರಿಗೇ ಗೊತ್ತಿದೆ. ಅವರಲ್ಲಿ ಅನೇಕ ಜನರು ಆಸ್ಪತ್ರೆಗೆ ಅಡ್ಮಿಟ್ ಆಗಿದ್ದಾರೆ. ಅದರ ಬಗ್ಗೆ ಸರ್ಕಾರದ ಹೇಳಿಕೆಯನ್ನು ಕೊಡಬೇಕು.

ಅಧ್ಯಕ್ಷರು.—312ನೇ ರೂಲ್ ಪ್ರಕಾರ ಕಾಲ್ ಅಟೆನ್‌ಷನ್ ನೋಟೀಸಿಗೆ ಸರ್ಕಾರದವರಿಂದ ಒಂದು ಸ್ಟೇಟ್‌ಮೆಂಟ್ ಮಾಡಿಸೋಣ.